ವಿಷಯ:- ನಗರ ಕೇಂದ್ರ ಗ್ರಂಥಾಲಯಗಳಲ್ಲಿ ಪುಸ್ತಕಗಳ ಖರೀದಿ.

1343 (2318) **ಶ್ರೀ ಯು.ಆರ್. ಸಭಾಪತಿ (ಉಡುಪಿ):-** ಮಾನ್ಯ ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನಗರ ಕೇಂದ್ರ ಗ್ರಂಥಾಲಯಗಳಲ್ಲಿ ಖರೀದಿಸಿರುವ ಪುಸ್ತಕಗಳನ್ನು ಪುನಃ ಪುನಃ ಖರೀದಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಸರ್ಕಾರದವರು ಕೈಗೊಂಡ ಕ್ರಮಗಳೇನು?

ಇ) ಈ ಪುಸ್ತಕಗಳನ್ನು ಖರೀದಿಸುವಾಗ ಇಲಾಖೆ ಅನುಸರಿಸುತ್ತಿರುವ ನೀತಿ ನಿಯಮಗಳ ವಿವರ ನೀಡುವುದು?

ಶ್ರೀ ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು):-

ಅ) ಬಂದಿದೆ.

ಆ) ಓದುಗರ ಬೇಡಿಕೆಯ ಮೇರೆಗೆ ಕೆಲವು ಶೀರ್ಷಿಕೆಗಳನ್ನು ಪುನಃ ಪುನಃ ಖರೀದಿಸಲಾಗಿದೆ ಈ ರೀತಿ ಪುನರಾವರ್ತನೆಯಾಗುವುದನ್ನು ತಪ್ಪಿಸಲು ಹಾಗೂ ಉತ್ತಮ ಗುಣಮಟ್ಟದ ಗ್ರಂಥಗಳನ್ನು ಆಯ್ಕೆ ಮಾಡುವ ಉದ್ದೇಶದಿಂದ ಉನ್ನತ ಮಟ್ಟದ ಗ್ರಂಥ ಆಯ್ಕೆ ಸಮಿತಿಯನ್ನು ರಚಿಸಲಾಗಿದೆ. ಆ ಸಮಿತಿಯು ಆಯಾ ವರ್ಷದಲ್ಲಿ ಪ್ರಕಟವಾದ ಗ್ರಂಥಗಳನ್ನು ಆಯ್ಕೆ ಮಾಡುತ್ತದೆ. ಈ ರೀತಿ ಆಯ್ಕೆ ಮಾಡಲಾದ ಪುಸ್ತಕಗಳನ್ನು ಜಿಲ್ಲಾ: ನಗರ ಗ್ರಂಥಾಲಯಗಳಿಗೆ ಖರೀದಿಸುವ ವ್ಯವಸ್ಥೆ ಮಾಡಿದೆ.

ಇ) ಸರ್ಕಾರದ ಆದೇಶ ಸಂಖ್ಯೆ ಇಡಿ 23 ಎಲ್.ಬಿ.ಪಿ. 94 ದಿನಾಂಕ: 8-11-95ರ ಅನುಬಂಧದಲ್ಲಿ ನೀತಿ ನಿಯಮಗಳ ವಿವರಣೆಯನ್ನು ನೀಡಲಾಗಿದೆ. ಅದರ ಪ್ರತಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ.

ಅನುಬಂಧ

1. ಯಾವುದೇ ಸಂಸ್ಥೆಗಳಿಂದ ಗ್ರಂಥಗಳನ್ನು ಖರೀದಿಸುವಾಗ ಫಂಡ್ಸ್ ಅಂಡ್ ಎಸ್ಟಾಬ್ಲಿಷ್‌ಮೆಂಟ್ ಕಾಯ್ದೆ, ಕರ್ನಾಟಕ ಮಾರಾಟ ತೆರಿಗೆ, ಕೇಂದ್ರ ಮಾರಾಟ ತೆರಿಗೆ ಕಾಯ್ದೆ ಪ್ರಕಾರ ನೊಂದಣಿಯಾದ ವ್ಯಾಪಾರಸ್ಥರನ್ನು ಅಧಿಕೃತ ಮಾರಾಟಗಾರರೆಂದು ಪರಿಗಣಿಸಬೇಕು. ಆಯಾ ಸಾಲಿನಲ್ಲಿ ನೊಂದಾಯಿಸಿದ ಅಥವಾ ನವೀಕರಿಸಿದ ನಿಯಮಿತ ಪ್ರಮಾಣಪತ್ರದ ಅಧಿಕೃತ ಪ್ರತಿಯನ್ನು ಅವರಿಂದ ಪಡೆದು ಗ್ರಂಥಗಳನ್ನು ಖರೀದಿಸುವುದು.

2. ಹೊರದೇಶದ ಪುಸ್ತಕಗಳನ್ನು ಖರೀದಿಸುವಾಗ ಚಾಲ್ತಿಯಲ್ಲಿರುವ ಗುಡ್ ಆಫೀಸ್ ಕಮಿಟಿಯಿಂದ ಕಾಲಕಾಲಕ್ಕೆ ಜಾರಿಯಾಗುವ ಪರಿಷ್ಕೃತ ದರಪಟ್ಟಿಯ ಅಧಿಕೃತ ಪಟ್ಟಿಯನ್ನು ಸರಬರಾಜುದಾರದಿಂದ ಪಡೆಯಬೇಕು. ಗುಡ್ ಆಫೀಸ್ ಕಮಿಟಿಯವರು ನಿಗದಿಪಡಿಸಿದ ದರವು ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಅನ್ವಯಿಸತಕ್ಕದ್ದು.

3. ಲೇಖನ ಹಾಗೂ ಲೇಖಕ ಪ್ರಕಾಶಕರಿಂದ, ಅವರು ಅಧಿಕೃತವಾಗಿ ಸೊಂದಾಯಿಸದೇ ಇದ್ದರೂ, ನೇರವಾಗಿ ಗ್ರಂಥಗಳನ್ನು ಖರೀದಿಸಬಹುದು.

4. ರಾಜ್ಯ: ಜಿಲ್ಲಾ: ನಗರ ಕೇಂದ್ರ ಗ್ರಂಥಾಲಯಗಳಲ್ಲಿ ಯಾವುದೇ ಭಾಷೆಯ ಗ್ರಂಥಗಳನ್ನು ಖರೀದಿಸುವಾಗ ರಾಜ್ಯ ಉನ್ನತ ಆಯ್ಕೆ ಸಮಿತಿಯ ಶಿಫಾರಸ್ಸು ಮಾಡುವ ಗ್ರಂಥಗಳನ್ನೇ ಖರೀದಿಸತಕ್ಕದ್ದು. ಹೀಗೆ ಗ್ರಂಥಗಳನ್ನು ಖರೀದಿಸುವಾಗ ಯಾವುದೇ ಸೋಡಿಯನ್ನು ಪಡೆಯತಕ್ಕದಲ್ಲ.

5. ಗ್ರಂಥಗಳನ್ನು ಖರೀದಿಗಾಗಿ ಶಿಫಾರಸ್ಸು ಮಾಡುವಾಗ ಉನ್ನತ ಆಯ್ಕೆ ಸಮಿತಿಯು ಹಾಗೆ ಶಿಫಾರಸ್ಸು ಮಾಡುವ ಪುಸ್ತಕಗಳ ಖರೀದಿ ಬೆಲೆಯನ್ನು ನಿಗದಿಪಡಿಸಬೇಕು. ಹೀಗೆ ಖರೀದಿ ಬೆಲೆಯನ್ನು ನಿಗದಿಪಡಿಸುವಾಗ ಗ್ರಂಥದ ಸತ್ವ ಹಾಗೂ ಮೌಲಿಕತೆ ಜೊತೆಗೆ ಅದಕ್ಕೆ ಉಪಯೋಗಿಸಿದ ಕಾಗದದ ಗುಣಮಟ್ಟ (ಸಾಮಾನ್ಯ ಕಾಗದ, ಮ್ಯಾಪ್‌ಲಿಥೋ ಕಾಗದ ಇತ್ಯಾದಿ) ಮುದ್ರಣ ಗುಣಮಟ್ಟ, ಹೊದಿಕೆಯ ಸ್ವರೂಪ (ಒಂದು ಬಣ್ಣ, ಎರಡು ಬಣ್ಣ ಇತ್ಯಾದಿ) ಮತ್ತು ಬಳಸಿದ ಕಾಗದ (ಲ್ಯಾಮಿನೇಷನ್ ಇತ್ಯಾದಿ), ಬೈಂಡಿಂಗ್ (ಪಿನ್ನಿಂಗ್, ಸೆಕ್ಷನ್ ಸ್ವಿಚ್ಚಿಂಗ್ ಇತ್ಯಾದಿ), ಒಳ ಪುಟಗಳಲ್ಲಿ ಉಪಯೋಗಿಸಲಾದ ಚಿತ್ರಗಳು ಇತ್ಯಾದಿಗಳನ್ನು ಗಮನಿಸಬೇಕು. ಇದಕ್ಕಾಗಿ ಒಂದು ಬೇರೆ ನಿಗದಿ ಉಪಸಮಿತಿಯನ್ನು ರಚಿಸತಕ್ಕದ್ದು. ಪುಸ್ತಕಗಳ ಆಯ್ಕೆ ಸಮಿತಿ ಅಧ್ಯಕ್ಷರೇ ಈ ಉಪಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸತಕ್ಕದ್ದು. ಗ್ರಂಥಾಲಯ ಇಲಾಖೆ ನಿರ್ದೇಶಕರು ಇದರ ಕಾರ್ಯದರ್ಶಿ ಆಗಿರತಕ್ಕದ್ದು. ಈ ಉಪಸಮಿತಿಗೆ ಸರ್ಕಾರಿ ಮುದ್ರಣಾಲಯದ ನಿರ್ದೇಶಕರನ್ನು ಅಥವಾ ಉಪನಿರ್ದೇಶಕರನ್ನು ತಾಂತ್ರಿಕ ಸಲಹೆಗಾರರನ್ನಾಗಿ ಆಹ್ವಾನಿಸತಕ್ಕದ್ದು. ಉನ್ನತ ಸಮಿತಿಯ ಇಬ್ಬರು ಸಾಹಿತ್ಯ ಸದಸ್ಯರು ಈ ಉಪಸಮಿತಿಯ ಸದಸ್ಯರಾಗಿರತಕ್ಕದ್ದು.

6. ಗ್ರಂಥಗಳನ್ನು ವರ್ಷದ ಪ್ರತಿ ತಿಂಗಳಲ್ಲಿ ಅಥವಾ ಎರಡು ತಿಂಗಳಿಗೊಮ್ಮೆ ಸಮಿತಿಯು ಆಯ್ಕೆ ಮಾಡಬೇಕು. ಈ ಆಯ್ಕೆ ಪ್ರಕ್ರಿಯೆಯು ವರ್ಷದುದ್ದಕ್ಕೂ ನಿರಂತರವಾಗಿ ನಡೆಯತಕ್ಕದ್ದು.

7. ಮಂಜೂರಾದ ಆಯವ್ಯಯದಲ್ಲಿ ಶೇಕಡಾ 80ರಷ್ಟು ಹಣವನ್ನು ಎಲ್ಲಾ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಗ್ರಂಥಗಳನ್ನು ಶೇಕಡ 10ರಷ್ಟು ಹಣವನ್ನು ಇತರ ಭಾರತೀಯ ಭಾಷೆಯ ಗ್ರಂಥಗಳನ್ನು ಖರೀದಿಸಲು ಬಳಸತಕ್ಕದ್ದು.

8. ಶೇಕಡಾ 10ರಷ್ಟು ಮೌಲ್ಯದ ಇಂಗ್ಲೀಷ್ ಪುಸ್ತಕಗಳನ್ನು ಖರೀದಿಸುವಾಗ ಭಾರತದಲ್ಲಿ ಪ್ರಕಟವಾದ ಪುಸ್ತಕಗಳಿಗೆ ಆದ್ಯತೆ ನೀಡತಕ್ಕದ್ದು. ಭಾರತದಲ್ಲಿ ಪ್ರಕಟವಾಗದೇ ಇದ್ದರೂ ತೀರಾ ಅಗತ್ಯವಾಗಿರುವ ಪುಸ್ತಕಗಳನ್ನು ಮಾತ್ರ ವಿದೇಶಗಳಿಂದ ತರಿಸಿಕೊಳ್ಳಲು ಆಯ್ಕೆ ಸಮಿತಿ ಶಿಫಾರಸ್ಸು ಮಾಡಬಹುದು.

9. ಪುಸ್ತಕದ ಮೇಲೆ ಬೆಲೆಗಳು ಮುದ್ರಿತವಾಗಿದ್ದು, ಎದ್ದು ಕಾಣುವಂತಿರಬೇಕು. ಸೀಸದ ಕಡ್ಡಿಯಿಂದ ಬರೆಯಲಾದ, ರಬ್ಬರ್ ಸ್ಟ್ಯಾಂಪ್‌ನಿಂದ ಮುದ್ರಿಸಲಾದ ಅಥವಾ ಬೇರೆಯಾಗಿ ಅಂಟಿಸಲಾದ ಬೆಲೆಗಳಿದ್ದಲ್ಲಿ ಅಂತಹ ಪುಸ್ತಕಗಳನ್ನು ಖರೀದಿಸಲು ಶಿಫಾರಸ್ಸು ಮಾಡದೇ ತಿರಸ್ಕರಿಬೇಕು. ಆದರೆ ಅಂಥಹ ಪುಸ್ತಕಗಳನ್ನು ಕೊಳ್ಳುವಾಗ ಅತ್ಯಂತ ಅಗತ್ಯವೆಂದು ಸಮಿತಿಗೆ ಕಂಡು ಬಂದಲ್ಲಿ, ಎಲ್ಲಾ ಭಾಷೆಯ ಪುಸ್ತಕಗಳಿಗೂ ಇದೇ ನಿಯಮ ಅನ್ವಯವಾಗತಕ್ಕದ್ದು. ಪ್ರಕಾಶಕರ ಮುದ್ರಿತ ಬೆಲೆ ಪಟ್ಟಿಯನ್ನು ಗಮನಿಸಿ ಬೆಲೆ ನಿಗದಿಪಡಿಸತಕ್ಕದ್ದು.

10. ಕರ್ನಾಟಕ ಮುದ್ರಣ ಮತ್ತು ನೊಂದಣಿ ಕಾನೂನು ಕಾಪಿರೈಟ್ ಕಾಯ್ದೆಯ ಮೇರೆಗೆ ರಾಜ್ಯ ಕೇಂದ್ರ ಗ್ರಂಥಾಲಯಕ್ಕೆ ಕಳುಹಿಸಿದ ಪ್ರತಿಗಳ ಬಗೆಗಿನ ರಸೀದಿಯ ಪ್ರತಿಯನ್ನು ಲೇಖಕರು: ಪ್ರಕಾಶಕರು ತಮ್ಮ ಗ್ರಂಥಗಳ ಖರೀದಿಗಾಗಿ ಗ್ರಂಥಾಲಯಕ್ಕೆ ಮನವಿ ಸಲ್ಲಿಸುವಾಗ ಲಗತ್ತಿಸತಕ್ಕದ್ದು.

11. ಖರೀದಿ ಮೊತ್ತದ ಶೇಕಡ 5ರಷ್ಟು ಬೆಲೆಯ ಗ್ರಂಥಗಳನ್ನು ಮುಖ್ಯ ಗ್ರಂಥಾಲಯಾಧಿಕಾರಿಗಳು ಓದುಗರ ಬೇಡಿಕೆಯನ್ನು ಪೂರೈಸುವುದಕ್ಕಾಗಿ ಸ್ವವಿವೇಚನೆಯಿಂದ ಖರೀದಿಸಬಹುದು. ಆದರೆ ಹಾಗೆ ಖರೀದಿಸಲಾದ ಪುಸ್ತಕಗಳ ಬೆಲೆ ಒಂದು ಪುಸ್ತಕಕ್ಕೆ ರೂ. 250-00ಗಳನ್ನು ಯಾವ ಕಾರಣದಿಂದಲೂ ಮೀರಿರಬಾರದು ಮತ್ತು ಹಾಗೆ ಖರೀದಿಸಲಾದ ಪುಸ್ತಕಗಳ ಪಟ್ಟಿಯನ್ನು ಸಕಾರಣ ಸಮರ್ಥನೆಗಳೊಡನೆ ಆಯ್ಕೆ ಸಮಿತಿಗೆ ಒಪ್ಪಿಸತಕ್ಕದ್ದು.

12. ಗ್ರಂಥಗಳನ್ನು ಖರೀದಿಸಲು ಆಯ್ಕೆ ಮಾಡುವಾಗ ಗ್ರಂಥಗಳಲ್ಲಿ ಆಡಕವಾಗಿರುವ ವಿಷಯ ಕ್ರಮಬದ್ಧವಾಗಿದ್ದು, ಪುಟಗಳು, ರಟ್ಟು ಕಟ್ಟುವಿಕೆ ಹಾಗೂ ಗ್ರಂಥಗಳ ಇನ್ನಿತರ ಬಾಹ್ಯ ರಚನೆಯನ್ನು ಸಹ ಗಮನದಲ್ಲಿಟ್ಟುಕೊಳ್ಳಬೇಕು. ಯಾವುದೇ ಪುಸ್ತಕದ ಕ್ಯಾಲಿಕೋ ಪ್ರತಿಗಳು ಲಭ್ಯವಿಲ್ಲದಿದ್ದಲ್ಲಿ ಮಾತ್ರ ಸಾದಾ ಪ್ರತಿಗಳನ್ನು ಖರೀದಿಸತಕ್ಕದ್ದು.

13. ರಾಜ್ಯ ಕೇಂದ್ರ ಉನ್ನತ ಆಯ್ಕೆ ಸಮಿತಿ ಶಿಫಾರಸ್ಸು ಮಾಡಿದ ಗ್ರಂಥಗಳನ್ನು ಮಾತ್ರವೇ ಈ ಗ್ರಂಥಾಲಯಗಳು ಖರೀದಿಸತಕ್ಕದ್ದು. ಆದ್ದರಿಂದ ಮುಖ್ಯ ಗ್ರಂಥಾಲಯಾಧಿಕಾರಿಗಳು ನಗರ : ಜಿಲ್ಲಾ ಪ್ರಾಧಿಕಾರ ಈ ಪುಸ್ತಕ ಖರೀದಿ ಬಗ್ಗೆ ಕೈಗೊಂಡ ಕ್ರಮವನ್ನು ಕುರಿತು ಮೂರು ತಿಂಗಳಿಗೊಮ್ಮೆ ನಿರ್ದೇಶಕರ ಕಛೇರಿಗೆ ವರದಿ ಸಲ್ಲಿಸತಕ್ಕದ್ದು. ಪುಸ್ತಕಗಳ ಆಯ್ಕೆ ಬಗ್ಗೆ ಏನಾದರೂ ದೂರುಗಳಿದ್ದಲ್ಲಿ ನಿರ್ದೇಶಕರಿಗೆ : ಸರ್ಕಾರಕ್ಕೆ ವರದಿ ಮಾಡತಕ್ಕದ್ದು.

14. ಯಾವುದೇ ಗ್ರಂಥವನ್ನು ಖರೀದಿಸುವಾಗ ಆ ಗ್ರಂಥದ ಇತ್ತೀಚಿನ ಆವೃತ್ತಿಯನ್ನು ಮಾತ್ರ ಖರೀದಿಸಬೇಕು.

15. ಒಂದೇ ಶೀರ್ಷಿಕೆಯನ್ನು ಪುನ: ಖರೀದಿಸಬಾರದು. ಆದರೆ ಹೆಚ್ಚು ಪ್ರತಿಗಳ ಅವಶ್ಯಕತೆ-

ಯಿದ್ದಲ್ಲಿ, ಓದುಗರ ಬೇಡಿಕೆಯನ್ನು ಗಣನೆಗೆ ತೆಗೆದುಕೊಂಡು, ಆಯ್ಕೆ ಸಮಿತಿಯ ಒಪ್ಪಿಗೆ ಪಡೆದು ಖರೀದಿಸಬಹುದು.

16. ಹೆಚ್ಚು ಬೇಡಿಕೆ ಇರುವ ಪುಸ್ತಕಗಳ ಅಗತ್ಯದಷ್ಟು ಸಂಖ್ಯೆಯ ಪ್ರತಿಗಳನ್ನು ಮಾತ್ರ ಕೊಂಡು ಕೊಂಡು ಅವುಗಳನ್ನು ಗ್ರಂಥಾಲಯದ ಅಲ್ಮಾರಾದಲ್ಲಿ ಇಡತಕ್ಕದ್ದು ಮತ್ತು ಅಗತ್ಯಕ್ಕಿಂತ ಹೆಚ್ಚು ಪುಸ್ತಕಗಳ ಪ್ರತಿಗಳನ್ನು ಕೊಂಡು ಕೊಂಡು ಅವುಗಳನ್ನು ಅನುಪಯುಕ್ತವಾಗಿ ಹಾಳು-ಮಾಡುವುದು ಕಂಡುಬಂದಲ್ಲಿ ಸಂಬಂಧಪಟ್ಟ ಮುಖ್ಯ ಗ್ರಂಥಾಲಯಾಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳತಕ್ಕದ್ದು.

17. ಯಾವ ಓದುಗರಿಂದಲೂ ಉಪಯೋಗಿಸಲ್ಪಡದ ಕಪಾಟಿನಲ್ಲಿಯೇ ಹೆಚ್ಚಿಗೆ ಇರುವ ಗ್ರಂಥ-ಗಳ ಹಾಗೂ ಹರಿದು ಹೋಗಿರುವ ಗ್ರಂಥಗಳ ವಿವರಣಾತ್ಮಕ ಪಟ್ಟಿಯನ್ನು ತಯಾರಿಸಿ ಕೈ-ಗೊಳ್ಳಬೇಕಾಗಿರುವ ಕ್ರಮವನ್ನು ಸೂಚಿಸಿ ಪ್ರತಿ ತಿಂಗಳು ನಿರ್ದೇಶಕರ ಕಛೇರಿಗೆ ವರದಿ-ಯನ್ನು ಸಲ್ಲಿಸತಕ್ಕದ್ದು.

18. ಯಾವುದೇ ಸಂಸ್ಥೆ: ಲೇಖಕ–ಪ್ರಕಾಶಕರಿಗೆ ಒಂದು ವರ್ಷದಲ್ಲಿ ಒಟ್ಟು ಮೂವತ್ತೈದು ಸಾವಿರ ರೂಪಾಯಿಗಳ (ರೂ. 35,000-00) ಬೆಲೆಗಿಂತ ಹೆಚ್ಚು ಬೆಲೆಯ ಪುಸ್ತಕಗಳನ್ನು ಖರೀದಿ-ಸಲು ಆದೇಶ ನೀಡಬಾರದು. ಹಾಗೂ ಒಂದೇ ಸಂಸ್ಥೆಯವರು ಹಲವಾರು ಮುಖಪತ್ರ ನಮೂನೆಗಳನ್ನು ಉಪಯೋಗಿಸಿ ಪುಸ್ತಕ ಸರಬರಾಜು ಮಾಡುವುದರ ಬಗ್ಗೆ ರಹಸ್ಯ ಮಾಹಿ-ತಿಯನ್ನು ಪಡೆದು, ಆ ಮಾಹಿತಿ ರುಜುವಾತಾದಲ್ಲಿ ಅಂತಹ ಸಂಸ್ಥೆಗಳಿಂದ ಪುಸ್ತಕ ಖರೀದಿ ಮಾಡುವುದನ್ನು ನಿಲ್ಲಿಸತಕ್ಕದ್ದು.

19. ಗ್ರಂಥಗಳನ್ನು ಖರೀದಿಸುವಾಗ ಜ್ಞಾನಪೀಠ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ಪಡೆದು ಕನ್ನಡಕ್ಕೆ ಭಾಷಾಂತರಗೊಂಡ ಗ್ರಂಥಗಳನ್ನು ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಕೇಂದ್ರ: ರಾಜ್ಯ ಸಾಹಿತ್ಯ ಅಕಾಡಮಿ ಪ್ರಶಸ್ತಿಗಳನ್ನು ಪಡೆದ ಪುಸ್ತಕಗಳನ್ನು ಖರೀದಿಸಲು ಕಡ್ಡಾಯವಾಗಿ ಶಿಫಾರಸ್ಸು ಮಾಡತಕ್ಕದ್ದು.

20. ಗ್ರಂಥಗಳ ಗುಣ ಮೌಲ್ಯ, ಬೇಡಿಕೆ, ಉಪಯುಕ್ತತೆ ಬೆಲೆಗಳನ್ನು ಗಮನದಲ್ಲಿಟ್ಟುಕೊಂಡು ಎಷ್ಟು ಸಂಖ್ಯೆಯಲ್ಲಿ ಪ್ರತಿಗಳನ್ನು ಖರೀದಿಸಬೇಕೆಂಬುದನ್ನು ಸಹ ಆಯ್ಕೆ ಸಮಿತಿಯು ನಿರ್ಧರಿಸತಕ್ಕದ್ದು.

ನಗರ: ಜಿಲ್ಲಾ: ತಾಲ್ಲೂಕು: ನಗರಸಭೆ: ಸಂಚಾರಿ ಗ್ರಂಥಾಲಯಕ್ಕೆ ಒಂದರಿಂದ ಮೂರು ಹಾಗೂ ಪಂಚಾಯತ್ ಗ್ರಂಥಾಲಯಕ್ಕೆ ಒಂದೊಂದು ಪ್ರತಿಯಂತೆ ಪುಸ್ತಕ ಖರೀದಿಸಬೇಕು.

21. ಪುಸ್ತಕ ಆಯ್ಕೆ ಸಮಿತಿ ಆಯ್ಕೆ ಮಾಡಿದ ಪುಸ್ತಕಗಳನ್ನು ಮಾತ್ರ ಖರೀದಿಸಬೇಕು ಆಯ್ಕೆ-ಯಾದ ಪುಸ್ತಕಗಳನ್ನು ಆಯಾ ಆರ್ಥಿಕ ವರ್ಷ ಹಾಗೂ ಆದರ ಮುಂದಿನ ವರ್ಷ ಮಾತ್ರ ಖರೀದಿಸಬಹುದು.

22. ಪುಸ್ತಕಗಳ ಪ್ಯಾಕಿಂಗ್ ಹಾಗೂ ರವಾನಿಸುವ ಪುಸ್ತಕಗಳ ದ್ಯಾಮರೇಜ್ ಹಾಗೂ ಸಾಗಾಣಿಕಾ ವೆಚ್ಚವನ್ನು ಪುಸ್ತಕ ಸರಬರಾಜುದಾರರು ಭರಿಸಬೇಕು.

ರಾಜ್ಯ ಕೇಂದ್ರ ಗ್ರಂಥಾಲಯ, ತಾಂತ್ರಿಕ ಗ್ರಂಥಾಲಯ, ಮಕ್ಕಳ ಗ್ರಂಥಾಲಯ, ರಾಜಾರಾಂ ಮೋಹನ್‌ರಾಯ್ ಪ್ರತಿಷ್ಠಾನ ಹಾಗೂ ಗ್ರಾಮ ಪಂಚಾಯತ್ ಗ್ರಂಥಾಲಯ ಯೋಜನೆ-ಗಳಿಗೂ ಸಹ ಈ ಸಮಿತಿಯೇ ಪುಸ್ತಕಗಳನ್ನು ಆಯ್ಕೆ ಮಾಡಬೇಕು.

-: ಪುಸ್ತಕ ಆಯ್ಕೆ ವಿಭಾಗ :-

1. ಸಾರ್ವಜನಿಕ ಗ್ರಂಥಾಲಯ ಇಲಾಖೆ ಪುಸ್ತಕಗಳನ್ನು ಖರೀದಿಸುವ ಬಗ್ಗೆ ವರ್ಷಕ್ಕೊಮ್ಮೆ ಕನ್ನಡ ಮತ್ತು ಇಂಗ್ಲೀಷ್ ಪತ್ರಿಕೆಗಳಲ್ಲಿ ವ್ಯಾಪಕ ಜಾಹೀರಾತು ನೀಡಿ ಆ ವರ್ಷದ ನಿರಂತರ ಖರೀದಿ ವಿಷಯವು ಸಾರ್ವಜನಿಕರ ಗಮನಕ್ಕೆ ಬರುವಂತೆ ಮಾಡತಕ್ಕದ್ದು.

2. ಆಯ್ಕೆಗೆ ಸಲ್ಲಿಸುವ ಎಲ್ಲಾ ಭಾಷೆಗಳ ಪುಸ್ತಕಗಳ ಶೀರ್ಷಿಕೆಯು ಆಯಾ ವರ್ಷದಲ್ಲಿ ಪ್ರಥಮ ಆವೃತ್ತಿಯಾಗಿ ಪ್ರಕಟಿತವಾಗಿರತಕ್ಕದು.

3. ಕೇಂದ್ರ ನಗರ ಗ್ರಂಥಾಲಯ ಮತ್ತು ಜಿಲ್ಲಾ ಕೇಂದ್ರ ಗ್ರಂಥಾಲಯಗಳ ಗ್ರಂಥಪಾಲಕರು ತಮಗೆ ನೀಡಿದ ಶೇಕಡಾ 5ರಂತೆ ಖರೀದಿಸುವ ಅಧಿಕಾರವನ್ನು ಈ ಕೆಳಗಿನ ಮಾರ್ಗ-ದರ್ಶನ ಸೂತ್ರದಂತೆ ಚಲಾಯಿಸಬಹುದು.

ಬೆಲೆಯ ಪುಸ್ತಕಗಳು:- ರೂ. 10-00 ರಿಂದ ರೂ. 50-00 ರವರೆಗೆ–ಮೂರರಿಂದ ಐದು ಪುಸ್ತಕಗಳು ಮಾತ್ರ

ರೂ. 52-00 ರಿಂದ ರೂ. 100-00ರವರೆಗೆ–ಎರಡು ಪುಸ್ತಕಗಳು ಮಾತ್ರ

ರೂ. 101-00ಕ್ಕಿಂತ ಮೇಲ್ಪಟ್ಟು–ಒಂದು ಪ್ರತಿ ಮಾತ್ರ

4. ಮೂವತ್ತು ಪುಟಗಳಿಗಿಂತ ಕಡಿಮೆ ಇರುವ ಯಾವ ಭಾಷೆಗಳ ಪುಸ್ತಕಗಳನ್ನು (ಮಕ್ಕಳ, ನವ-ಸಾಕ್ಷರ ಪುಸ್ತಕಗಳನ್ನು ಹೊರತು ಪಡಿಸಿ) ಖರೀದಿಸಬಾರದು.

5. ಮಂಡಲ ಗ್ರಂಥಾಲಯಗಳಲ್ಲಿ ಶೇಕಡ 95ರಷ್ಟು ಕನ್ನಡ ಪುಸ್ತಕಗಳನ್ನೇ ಖರೀದಿಸಬೇಕು.

6. ಲೇಖಕರೇ ಪ್ರಕಾಶಕರಾಗಿರುವ ಸಂದರ್ಭದಲ್ಲಿ ಲೇಖಕರೇ ಅರ್ಜಿ ಸಲ್ಲಿಸಬೇಕು.

7. ಪುಸ್ತಕಗಳನ್ನು ಪ್ರಕಟಿಸುವ ಮೂಲ ಪ್ರಕಾಶಕರು ಅಥವಾ ಅವರ ಅನುಮತಿಯನ್ನು ಅಧಿಕೃತವಾಗಿ ಪಡೆದು ಪುಸ್ತಕ ವ್ಯಾಪಾರಿಗಳು ಮಾತ್ರ ಅರ್ಜಿ ಸಲ್ಲಿಸಬೇಕು.

8. ಮುದ್ರಣಕ್ಕೆ ಉತ್ತಮ ಕಾಗದ ಬಳಸಿರಬೇಕು. ನ್ಯೂಸಪ್ರಿಂಟ್ ಅಥವಾ ಇತರೆ ಬಗೆಯ ಆಗ್ಗದ ಕಾಗದದಲ್ಲಿ ಮುದ್ರಿಸಿರುವ ಪುಸ್ತಕಗಳನ್ನು ಪರಿಗಣಿಸಕೂಡದು.

9. ಪುಸ್ತಕದ ಒಳ ಎರಡನೇ ಪುಟದಲ್ಲಿ (ಶೀರ್ಷಿಕೆ ಪುಟದ ಹಿಂಬದಿಯಲ್ಲಿ) ಕಡ್ಡಾಯವಾಗಿ ಗ್ರಂಥದ ಶೀರ್ಷಿಕೆ ಹೆಸರು, ಲೇಖಕರ ಹೆಸರು, ಪ್ರಕಾಶಕರ ವಿಳಾಸ, ಪುಟ ಸಂಖ್ಯೆ, ಪ್ರಕಟಣೆಯ ವರ್ಷ, ಮಾರಾಟ ಬೆಲೆ ಹಾಗೂ ಮರು ಮುದ್ರಣದ ವಿವರಗಳನ್ನು ಮುದ್ರಿಸಿರಬೇಕು.

10. ಪುಸ್ತಕದ ಆಯ್ಕೆ ಹಾಗೂ ಅವುಗಳ ಬೆಲೆ ನಿಗದಿ ವಿಷಯದಲ್ಲಿ ಸಮಿತಿಯ ತೀರ್ಮಾನವೇ ಅಂತಿಮವಾಗಿರತಕ್ಕದು.

11. ಅಗತ್ಯ ಕಂಡು ಬಂದಲ್ಲಿ ಉನ್ನತ ಪುಸ್ತಕ ಆಯ್ಕೆ ಸಮಿತಿಯು ರಾಜ್ಯದಲ್ಲಿ ನಡೆಯುವ ಪುಸ್ತಕ ಪ್ರದರ್ಶನಗಳಿಗೆ ಭೇಟಿ ನೀಡಿ ಪುಸ್ತಕಗಳನ್ನು ಆಯ್ಕೆ ಮಾಡುವ ಹಾಗೂ ಅಂತಹ ಪುಸ್ತಕ ಪ್ರದರ್ಶನ ಏರ್ಪಡಿಸುವಂತೆ ಸಂಬಂಧಿಸಿದವರನ್ನು ಕೋರಬಹುದು.

ವಿಷಯ:- ರಾಜ್ಯಕ್ಕೆ ಕೇಂದ್ರ ಸರ್ಕಾರದ ಉದ್ಯೋಗ ಭರವಸೆ ಯೋಜನೆ.

2103 **ಶ್ರೀ ಎಂ. ಚಂದ್ರಪ್ಪ (ಭರಮಸಾಗರ):-** ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೇಂದ್ರ ಸರ್ಕಾರದ ಉದ್ಯೋಗ ಭರವಸೆ ಯೋಜನೆಯಡಿಯಲ್ಲಿ 1995-96ನೇ ಸಾಲಿಗೆ ಕರ್ನಾಟಕ ರಾಜ್ಯಕ್ಕೆ ಬಿಡುಗಡೆಯಾದ ಹಣ ಎಷ್ಟು?

ಆ) ಈ ಪೈಕಿ ಯಾವ ಯಾವ ವಿಧಾನಸಭಾ ಕ್ಷೇತ್ರಕ್ಕೆ ಅಥವಾ ತಾಲ್ಲೂಕಿಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ? (ವಿವರ ನೀಡುವುದು ತಾಲ್ಲೂಕುವಾರು ವಿಧಾನಸೌಧವಾರು)

ಶ್ರೀ ಎಂ.ಪಿ. ಪ್ರಕಾಶ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):-

ಅ) ಕೇಂದ್ರ ಸರ್ಕಾರ 1995-96ನೇ ಸಾಲಿಗೆ ಉದ್ಯೋಗ ಭರವಸೆ ಯೋಜನೆಯಡಿ ಕರ್ನಾಟಕ ರಾಜ್ಯಕ್ಕೆ ಕೇಂದ್ರದ ಪಾಲಿನ ಹಣ 10970.00 ಲಕ್ಷ ರೂ. ಗಳನ್ನು ಬಿಡುಗಡೆ ಮಾಡಿದೆ.

ಆ) ತಾಲ್ಲೂಕುವಾರು ವಿವರಗಳ ತಃಖ್ತೆಯನ್ನು ಲಗತ್ತಿಸಲಾಗಿದೆ. (ಕೇಂದ್ರ ಹಾಗೂ ರಾಜ್ಯ ಪಾಲು ಸೇರಿ)

ಶ್ರೀ ಎಂ.ಪಿ. ಚಂದ್ರಪ್ಪ (ಭರಮಸಾಗರ) ಚುಕ್ಕೆ ಗುರುತಿನ ಪ್ರಶ್ನೆಯ ಸಂಖ್ಯೆ: **2103**ಕ್ಕೆ ತಾಲ್ಲೂಕುವಾರು ವಿವರವನ್ನು ತೋರಿಸುವ ತಃಖ್ತೆ (ಕೇಂದ್ರ ಹಾಗೂ ರಾಜ್ಯ ಪಾಲು ಸೇರಿ)

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಜಿಲ್ಲೆ	ಬ್ಲಾಕು	1995-96ನೇ ಸಾಲಿಗೆ ಬಿಡುಗಡೆ ಮಾಡಿರುವ ಅನುದಾನ.
1	2	3	4
1.	ಬೆಳಗಾಂ	1. ಅಥಣಿ	150.00
		2. ಗೋಕಾಕ್	150.00
		3. ರಾಮದುರ್ಗ	112.50
		4. ಸೌಂದತ್ತಿ	150.00
		5. ಬೈಲಹೊಂಗಲ	150.00
		6. ಬೆಳಗಾಂ	150.00
		7. ಹುಕ್ಕೇರಿ	150.00
			1012.50
2.	ಬೀದರ್	1. ಔರಾದ್	100.00
		2. ಬಸವಕಲ್ಯಾಣ	100.00
		3. ಹುಮ್ನಾಬಾದ್	100.00
		4. ಭಾಲ್ಕಿ	75.00
		5. ಬೀದರ್	25.00
			400.00
3.	ಬಿಜಾಪುರ	1. ಬಾದಾಮಿ	112.50
		2. ಬಾಗಲಕೋಟೆ	112.50
		3. ಬಾಗೇವಾಡಿ	150.00
		4. ಬೀಳಗಿ	112.50
		5. ಹುನಗುಂದ	112.50
		6. ಇಂಡಿ	150.00

1	2	3	4
		7. ಜಮಖಂಡಿ	150.00
		8. ಮುದ್ದೇಬಿಹಾಳ	112.50
		9. ಮುಧೋಳ	112.50
		10. ಸಿಂಧಗಿ	150.00
		11. ಬಿಜಾಪುರ	150.00
			1425.00
4.	ಬಳ್ಳಾರಿ	1. ಹಡಗಲಿ	112.50
		2. ಹರಪನಹಳ್ಳಿ	150.00
		3. ಕೂಡ್ಲಗಿ	150.00
		4. ಹಗರಿಬೊಮ್ಮನಹಳ್ಳಿ	112.50
		5. ಸಂಡೂರು	112.50
		6. ಬಳ್ಳಾರಿ	25.00
		7. ಹೊಸಪೇಟೆ	25.00
		8. ಸಿರಿಗುಪ್ಪ	25.00
			712.50
5.	ಚಿತ್ರದುರ್ಗ	1. ಚಳ್ಳಕೆರೆ	150.00
		2. ಚಿತ್ರದುರ್ಗ	150.00
		3. ಹೊಳಲ್ಕೆರೆ	112.50
		4. ಹೊಸದುರ್ಗ	112.50
		5. ಜಗಳೂರು	112.50
		6. ಮಾಳಕಾಲ್ಮೂರು	112.50
		7. ದಾವಣಗೆರೆ	25.00
		8. ಹರಿಹರ	25.00
		9. ಹಿರಿಯೂರು	25.00
			825.00

1	2	3	4
6.	ಚಿಕ್ಕಮಗಳೂರು:	1. ಕಡೂರು	100.00
		2. ಕೊಪ್ಪ	75.00
		3. ಮೂಡಿಗೆರೆ	75.00
		4. ಎನ್.ಆರ್. ಪುರ	50.00
		5. ಶೃಂಗೇರಿ	50.00
		6. ಚಿಕ್ಕಮಗಳೂರು	75.00
		7. ತರೀಕೆರೆ	75.00
			500.00
7.	ಧಾರವಾಡ:	1. ಬ್ಯಾಡಗಿ	75.00
		2. ಶಿಗ್ಗಾಂವ್	75.00
		3. ಧಾರವಾಡ	75.00
		4. ಗದಗ್	75.00
		5. ಹಾವೇರಿ	75.00
		6. ಹಿರೇಕೆರೂರು	75.00
		7. ಹುಬ್ಬಳ್ಳಿ	75.00
		8. ಕಲಘಟಗಿ	75.00
		9. ಕುಂದಗೋಳ	75.00
		10. ಮುಂಡರಗಿ	75.00
		11. ರಾಣೆಬೆನ್ನೂರು	100.00
		12. ರೋಣ	75.00
		13. ಸವಣೂರು	75.00
		14. ಶಿರಹಟ್ಟಿ	75.00
		15. ಹಾನಗಲ್	25.00
		16. ನರಗುಂದ	25.00
		17. ನವಲಗುಂದ	25.00
			1150.00

1	2	3	4
8.	ಗುಲ್ಬರ್ಗಾ:	1. ಚಿಂಚೋಳಿ	25.00
		2. ಅಫಜಲ್‌ಪುರ	75.00
		3. ಆಳಂದ	100.00
		4. ಚಿತ್ತಾಪೂರ	100.00
		5. ಗುಲ್ಬರ್ಗಾ	100.00
		6. ಸೇಡಂ	75.00
		7. ಷಹಾಪೂರ	100.00
		8. ಶೋರಾಪುರ	100.00
		9. ಯಾದಗಿರಿ	100.00
		10. ಜೇವರ್ಗಿ	75.00
			850.00
9.	ಕೋಲಾರ:	1. ಬಾಗೇಪಲ್ಲಿ	112.50
		2. ಬಂಗಾರಪೇಟ್	150.00
		3. ಚಿಂತಾಮಣಿ	112.50
		4. ಗುಡಿಬಂಡೆ	75.00
		5. ಕೋಲಾರ	150.00
		6. ಮಾಲೂರು	112.50
		7. ಮುಳಬಾಗಿಲು	112.50
		8. ಶಿಡ್ಲಘಟ್ಟ	112.50
		9. ಶ್ರೀ ನಿವಾಸಪುರ	112.50
		10. ಚಿಕ್ಕಬಳ್ಳಾಪುರ	25.00
		11. ಗೌರಿಬಿದನೂರು	25.00
			1100.00
10.	ರಾಯಚೂರು	1. ದೇವದುರ್ಗ	112.50
		2. ಕುಷ್ಟಗಿ	112.50
		3. ಲಿಂಗಸುಗೂರು	150.00

1	2	3	4
		4. ಯಲ್ಬುರ್ಗಾ	112.50
		5. ಕೊಪ್ಪಳ	150.00
		6. ರಾಯಚೂರು	112.50
			750.00
11.	ತುಮಕೂರು:	1. ಚಿಕ್ಕನಾಯಕನಹಳ್ಳಿ	75.00
		2. ಕೊರಟಗೆರೆ	75.00
		3. ಮಧುಗಿರಿ	100.00
		4. ಪಾವಗಡ	75.00
		5. ಶಿರಾ	100.00
		6. ತಿಪಟೂರು	75.00
		7. ಗುಬ್ಬಿ	100.00
		8. ಕುಣಿಗಲ್	100.00
		9. ತುಮಕೂರು	100.00
		10. ತುರುವೇಕೆರೆ	25.00
			825.00
12.	ದಕ್ಷಿಣ ಕನ್ನಡ:	1. ಬಂಟ್ವಾಳ	150.00
		2. ಬೆಳ್ತಂಗಡಿ	150.00
		3. ಕಾರ್ಕಳ	150.00
		4. ಕುಂದಾಪುರ	150.00
		5. ಮಂಗಳೂರು	150.00
		6. ಪುತ್ತೂರು	150.00
		7. ಸುಳ್ಯ	112.50
		8. ಉಡುಪಿ	150.00
			1162.50
13.	ಕೊಡಗು:	1. ಮಡಿಕೇರಿ	112.50
		2. ಸೋಮವಾರ ಪೇಟ್	112.50

1	2	3	4
		3. ವೀರಾಜ ಪೇಟ್	112.50
			337.50
14.	ಮೈಸೂರು:	1. ಚಾಮರಾಜನಗರ	150.00
		2. ಗುಂಡ್ಲುಪೇಟೆ	112.50
		3. ಹುಣಸೂರು	112.50
		4. ಹೆಚ್.ಡಿ.ಕೋಟ್	150.00
		5. ಕೊಳ್ಳೇಗಾಲ್	150.00
		6. ನಂಜನಗೂಡು	150.00
		7. ಪಿರಿಯಾ ಪಟ್ಟಣ	112.50
		8. ಯಳಂದೂರು	75.00
		9. ಮೈಸೂರು	150.00
			1162.50
15.	ಬೆಂಗಳೂರು (ಗ್ರಾಮಾಂತರ)	1. ಚನ್ನಪಟ್ಟಣ	112.50
		2. ದೇವನಹಳ್ಳಿ	112.50
		3. ದೊಡ್ಡಬಳ್ಳಾಪುರ	112.50
		4. ಹೊಸ ಕೋಟೆ	112.50
		5. ಕನಕಪುರ	150.00
		6. ಮಾಗಡಿ	112.50
		7. ನೆಲಮಂಗಲ	112.50
		8. ರಾಮನಗರಂ	112.50
			937.50
16.	ಹಾಸನ:	1. ಹಾಸನ	150.00
		2. ಹೋಲೂರು	112.50
		3. ಚನ್ನರಾಯಪಟ್ಟಣ	150.00
		4. ಅರಸೀಕೆರೆ	150.00
			562.50
		ಒಟ್ಟು ಜುಮ್ಲಾ	13712.50